ಇ) ಕೇಂದ್ರ ಸರ್ಕಾರವನ್ನು ರೈತರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಡಂಕಲ್ ಪ್ರಸ್ತಾವನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಕೋರಿದೆ.

ಈ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

634 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರುಗಳ ಚುನಾವಣೆಗಳನ್ನು ಸರ್ಕಾರ ಮುಂದಕ್ಕೆ ಹಾಕಿದೆಯೇ;*

ಆ) *ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?*

ಇ) *ರಾಜ್ಯದ ಇತರ ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಯನ್ನು ಮುಂದೆ ಹಾಕಲಾಗಿದೆ;*

ಈ) *ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಹೌದು.

ಆ) ಜಿಲ್ಲಾಧಿಕಾರಿಗಳು ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳಿಗೆ ಮೀಸಲಾತಿ ನಿಗದಿ ಪಡಿಸಿ ಹೊರಡಿಸಿದ ಆದೇಶವು ಸರಿಯಲ್ಲ ಎಂದು ಮನವಿಗಳು ಸ್ವೀಕೃತವಾದುದರಿಂದ.

ಇ) ರಾಜ್ಯದ 10 ಜಿಲ್ಲೆಗಳಲ್ಲಿ ಒಟ್ಟು 37 ತಾಲ್ಲೂಕುಗಳಲ್ಲಿ (ಪಟ್ಟಿ ಲಗತ್ತಿಸಿದೆ)

ಈ) 1994ರ ಮಾರ್ಚ್ 31 ರೊಳಗೆ ಈ ಚುನಾವಣೆಗಳನ್ನು ನಡೆಸಲಾಗುವುದು.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
1	ಗುಲ್ಬರ್ಗಾ	ಎಲ್ಲಾ ತಾಲ್ಲೂಕುಗಳು.
2	ರಾಯಚೂರು	ಎಲ್ಲಾ ತಾಲ್ಲೂಕುಗಳು.
3	ಬಳ್ಳಾರಿ	ಸಿರಗುಪ್ಪ ತಾಲ್ಲೂಕು, ಹೊಸಪೇಟೆ ತಾಲ್ಲೂಕು, ಹರಪನಹಳ್ಳಿ ತಾಲ್ಲೂಕು, ಕೂಡ್ಲಿಗಿ ತಾಲ್ಲೂಕು.
4	ಬಿಜಾಪುರ	ಮುದ್ದೇಬಿಹಾಳ್ ತಾಲ್ಲೂಕು, ಬಸವನಬಾಗೇವಾಡಿ ತಾಲ್ಲೂಕು.
5	ಬೆಂಗಳೂರು (ಗ್ರಾಮಾಂತರ)	ಹೊಸಕೋಟೆ ತಾಲ್ಲೂಕು, ರಾಮನಗರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ನೆಲಮಂಗಲ ತಾಲ್ಲೂಕು.

6	ಬೆಂಗಳೂರು (ನಗರ)	ಯಲಹಂಕ (ಬೆಂಗಳೂರು ಉತ್ತರ)
		ಆನೇಕಲ್
		ವರ್ತೂರು ವಿಧಾನ ಸಭಾ ಕ್ಷೇತ್ರ
7	ಕೋಲಾರ	ಮಾಲೂರು
8	ಮಂಡ್ಯ	ಮಳವಳ್ಳಿ,
		ಮದ್ದೂರು
9	ಧಾರವಾಡ	ಹುಬ್ಬಳ್ಳಿ (ಗ್ರಾಮಾಂತರ)
10	ಉತ್ತರ ಕನ್ನಡ	ಕಾರವಾರ
		ಸೂಪಾ

ಬಸವಕಲ್ಯಾಣದಲ್ಲಿ ಪಟ್ಟಣ ಸಹಕಾರಿ ಬ್ಯಾಂಕ್ ತೆರೆಯುವುದು

635 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳನ್ನು ತೆರೆಯಲಾಗಿದೆ.

ಆ) ಬೀದರ್ ಜಿಲ್ಲೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು?

ಇ) ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕು ತೆರೆಯಲು ಸರ್ಕಾರ ರಿಸರ್ವ್ ಬ್ಯಾಂಕಿನ ಅನುಮತಿ ಕೋರಿದೆಯೇ?

ಈ) ಹಾಗಿದ್ದಲ್ಲಿ ಯಾವಾಗ ಬಸವ ಕಲ್ಯಾಣದಲ್ಲಿ ಪಟ್ಟಣ ಸಹಕಾರ ಬ್ಯಾಂಕ್ನು ತೆರೆಯಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ರಾಜ್ಯದ ಪಟ್ಟಣ, ಅರೆ ಪಟ್ಟಣ ಪ್ರದೇಶಗಳಲ್ಲಿ ಒಟ್ಟು 223 ಪಟ್ಟಣ ಸಹಕಾರ ಬ್ಯಾಂಕುಗಳನ್ನು ನೋಂದಾಯಿಸಲಾಗಿದೆ.

ಆ) 3

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಬೈಲಹೊಂಗಲದಲ್ಲಿ ಪರತಂತ್ರ ಜೀವಿ ಪ್ರಯೋಗಲಯ ಕಟ್ಟಡ

631 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲದ ಪರತಂತ್ರ ಜೀವಿ ಪ್ರಯೋಗ ಶಾಲೆ ಕಟ್ಟಡ ಕಟ್ಟುವ ಸಲುವಾಗಿ ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಅಲ್ಲಿ ಪರತಂತ್ರಜೀವಿ ಪ್ರಯೋಗ ಶಾಲೆಯ ಕಟ್ಟಡ ಕಟ್ಟಲು ಯಾವ ಕ್ರಮ ಕೈಗೊಂಡಿರುವರು.

ಇ) ಕೃಷಿ ಇಲಾಖೆ ಅಧಿಕಾರಿಗಳು ನೀಡಿದ ಆದೇಶದ ಪ್ರಕಾರ ಭೂ ಸೇನಾ ನಿಗಮದವರು ಅಲ್ಲಿ ಕಟ್ಟಡ ಕಟ್ಟಲು ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಿದ ಸಂಗತಿ ನಿಜವೇ?

ಈ) ಭೂ ಸೇನಾ ನಿಗಮದವರು ತಯಾರಿಸಿದ ಅಂದಾಜು ವೆಚ್ಚ ಪತ್ರಿಕೆ ಪ್ರಕಾರ ಎಷ್ಟು ಹಣ ಬೇಕಾಗುವುದು.

ಉ) ಈ ಹಣವನ್ನು ಸನ್ 1993-94ನೇ ಸಾಲಿನಲ್ಲಿ ಅಥವಾ 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):